# 10 ನೇ ತರಗತಿ ವಿಜ್ಞಾನ ಸೇತುಬಂಧ

| ಕಲಿಕಾಂಶಗಳು | ಕಲಿಕಾಂಶವಾರು ಪ್ರಶ್ನೆಗಳು | ಸೇತುಬಂಧದಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು |
|---|---|---|
| ಪರಿಸರ ವಿಜ್ಞಾನ<br>ಪರಿಸರ ವಿಜ್ಞಾನದ ಅರ್ಥ,<br>ಮಾನವ ಚಟುವಟಿಕೆಗಳಿಂದ ಪರಿಸರದ ಮೇಲಾಗುತ್ತಿರುವ ಪರಿಣಾಮಗಳು,<br>ಪರಿಸರ ಮಾಲಿನ್ಯ – ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ನೆಲ ಮಾಲಿನ್ಯ | 1. ಪರಿಸರ ವಿಜ್ಞಾನ ಎಂದರೇನು?<br>2. ಕೈಗಾರಿಕೀಕರಣ ಮತ್ತು ಗಣಿಗಾರಿಕೆಗಳಿಂದ ಪರಿಸರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳೇನು?<br>3. ಪರಿಸರ ಮಾಲಿನ್ಯ ಎಂದರೇನು?<br>4. ವಾಯು ಮಾಲಿನ್ಯ ಎಂದರೇನು?<br>5. ಜಲ ಮಾಲಿನ್ಯ ಎಂದರೇನು?<br>6. ಭೂ ಮಾಲಿನ್ಯ ಎಂದರೇನು? | • ಪರಿಸರ ವಿಜ್ಞಾನದ ಅರ್ಥ ಚರ್ಚಿಸಿ ಮನಗಾಣಿಸುವುದು.<br>• ಕೈಗಾರಿಕೀಕರಣ, ಗಣಿಗಾರಿಕೆ ಮತ್ತು ನಗರೀಕರಣಗಳ ಪರಿಣಾಮಗಳ ಮೇಲೆ ಚರ್ಚೆ<br>• ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ನೆಲ ಮಾಲಿನ್ಯಗಳಿಗೆ ಸಂಬಂಧಿಸಿದ ಚಿತ್ರ ಪಟ / ಸ್ಲೈಡ್ ಶೋ ದೊಂದಿಗೆಕಾರಣ ಮತ್ತು ಪರಿಣಾಮಗಳ ಪರಿಚಯ ಮಾಡಿಸುವುದು |
| ಜೀವಿ ಸಂಘಟನೆಯ ಮಜಲುಗಳು<br>ಅಕೋಶೀಯ, ಕೋಶೀಯ, ಅಂಗಾಂಶ ಮತ್ತು ಅಂಗವ್ಯೂಹ ಮಟ್ಟದ ಜೀವಿಗಳ ಪರಿಚಯ,<br>ಅಂಗಾಂಶ, ಅಂಗ, ಅಂಗವ್ಯೂಹಗಳ ಪರಿಚಯ ಮತ್ತು ಕಾರ್ಯಗಳು,<br>ಜೀವಗಳ ವರ್ಗೀಕರಣ | 1. ಅಕೋಶೀಯ, ಕೋಶೀಯ, ಅಂಗಾಂಶ ಮತ್ತು ಅಂಗವ್ಯೂಹ ಮಟ್ಟದ ಜೀವಿಗಳಿಗೆ ಒಂದೊಂದು ಉದಾಹರಣೆ ಕೊಡಿ.<br>2. ಸಸ್ಯಗಳಲ್ಲಿ ನೀರು ಮತ್ತು ಆಹಾರ ಸಾಗಾಣಿಕೆಗೆ ಸಹಾಯಕವಾದ ಅಂಗಾಂಶಗಳನ್ನು ಹೆಸರಿಸಿ.<br>3. ಪ್ರಾಣಿಗಳ ಯಾವುದಾದರೂ ಎರಡು ಅಂಗಾಂಶಗಳು ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ.<br>4. ಪ್ರಾಣಿಗಳ ಯಾವುದಾದರೂ ಎರಡು ಅಂಗಗಳು ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ.<br>5. ಪ್ರಾಣಿಗಳ ಯಾವುದಾದರೂ ಎರಡು ಅಂಗ ವ್ಯೂಗಹಗಳು ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ.<br>6. ಅಕೋಶೀಯ ಮಟ್ಟದ ಜೀವಿಗಳು ಮೇಲ್ಮಟ್ಟದ ಜೀವಿಗಳಿಂದ ಹೇಗೆ ಭಿನ್ನವಾಗಿವೆ? | • ವೈಯುಕ್ತಿಕ / ಗುಂಪು ಚಟುವಟಿಕೆ – ಚಿತ್ರಪಟಗಳ ನೆರವಿನಿಂದ ಅಕೋಶೀಯ, ಕೋಶೀಯ, ಅಂಗಾಂಶ ಮತ್ತು ಅಂಗವ್ಯೂಹ ಮಟ್ಟದ ಜೀವಿಗಳನ್ನು ವರ್ಗೀಕರಿಸಲು ನೆರವಾಗುವುದು.<br>• ಪ್ರಾಣಿ ಮತ್ತು ಸಸ್ಯ ಅಂಗಾಂಶಗಳನ್ನು ಪಟ್ಟಿ ಮಾಡಿಸಿ ಅವುಗಳ ಕಾರ್ಯಗಳನ್ನು ಹೇಳಲು ಅಭ್ಯಾಸ ಮಾಡಿಸುವುದು.<br>• ಪ್ರಾಣಿಗಳ ಹೊರ ಮತ್ತು ಒಳ ಅಂಗಗಳನ್ನು ಪಟ್ಟಿ ಮಾಡಿಸಿ ಅವುಗಳ ಕಾರ್ಯಗಳನ್ನು ಹೇಳಲು ಅಭ್ಯಾಸ ಮಾಡಿಸುವುದು.<br>• ಅಂಗವ್ಯೂಹಗಳನ್ನು ಪಟ್ಟಿ ಮಾಡಿಸಿ ಕಾರ್ಯಗಳನ್ನು ಹೇಳಲು ಅಭ್ಯಾಸ ಮಾಡಿಸುವುದು.<br>• ಅಕೋಶೀಯ ಮತ್ತು ಕೋಶೀಯ ಜೀವಿಗಳ ನಡುವಿನ ವ್ಯತ್ಯಾಸಗಳನ್ನು ಚರ್ಚಿಸುವುದು. |
| ಅಣು ಜೀವಿಗಳು<br>ಹಾನಿಕಾರಕ ಅಣುಜೀವಿಗಳು,<br>ಅಣುಜೀವಿಗಳಿಂದ ಮಾನವನಲ್ಲಿ ಕಂಡು ಬರುವ ರೋಗಗಳು. | 1. ಅಣುಜೀವಿಗಳ ಯಾವುದಾದರೂ ಎರಡು ಹಾನಿಕಾರಕ ಚಟುವಟಿಕೆಗಳನ್ನು ತಿಳಿಸಿ.<br>2. ಬ್ಯಾಕ್ಟೀರಿಯಾಗಳಿಂದ ಮಾನವರಲ್ಲಿ ಕಾಣಿಸಿಕೊಳ್ಳಬಹುದಾದ ಎರಡು ರೋಗಗಳನ್ನು ಹೆಸರಿಸಿ.<br>3. ವೈರಸ್‌ಗಳಿಂದ ಮಾನವರಲ್ಲಿ ಕಾಣಿಸಿಕೊಳ್ಳಬಹುದಾದ ಎರಡು ರೋಗಗಳನ್ನು ಹೆಸರಿಸಿ. | • ಗುಂಪು ಚರ್ಚೆ – ಅಣುಜೀವಿಗಳ ಹಾನಿಕಾರಕ ಚಟುವಟಿಕೆಗಳನ್ನು ಪಟ್ಟಿ ಮಾಡಿಸುವುದು.<br>• ಗುಂಪಿನಲ್ಲಿ ಚಟುವಟಿಕೆ – ಪಠ್ಯ ಪುಸ್ತಕದ ನೆರವಿನಿಂದ ವಿವಿಧ ಬಗೆಯ ಅಣುಜೀವಿಗಳಿಂದ ಮಾನವರಲ್ಲಿ ಬರಬಹುದಾದ ರೋಗಗಳು ಮತ್ತು ಅವಕ್ಕೆ ಕಾರಣವಾದ ಅಣುಜೀವಿಗಳನ್ನು ಪಟ್ಟಿ ಮಾಡಿಸುವುದು. |

| | | |
|---|---|---|
| | 4. ಪ್ರೋಟೋಜೋವಾಗಳು / ಏಕಕೋಶಜೀವಿಗಳಿಂದ ಮಾನವರಲ್ಲಿ ಕಾಣಿಸಿಕೊಳ್ಳಬಹುದಾದ ಎರಡು ರೋಗಗಳನ್ನು ಹೆಸರಿಸಿ. | |
| ದ್ರವ್ಯದ ಗುಣಗಳು<br>ಅನಿಲಗಳ ವಿಶಿಷ್ಟ ಗುಣಗಳು,<br>ಪರಮಾಣು ರಚನೆ – ಇಲೆಕ್ಟ್ರಾನ್ ವಿನ್ಯಾಸ | 1. ಘನ ಮತ್ತು ದ್ರವಗಳನ್ನು ಅನಿಲಗಳಂತೆ ಸಂಪೀಡಿಸಲಗದು.ಏಕೆ?<br>2. ಇಲೆಕ್ಟ್ರಾನ್ ವಿನ್ಯಾಸ ಎಂದರೇನು?<br>3. ಈ ಧಾತುಗಳ ಇಲೆಕ್ಟ್ರಾನ್ ವಿನ್ಯಾಸ ಬರೆಯಿರಿ – ಸೋಡಿಯಂ – ಪರಮಾಣು ಸಂಖ್ಯೆ 11,<br>ಕ್ಲೋರೀನ್ – ಪರಮಾಣು ಸಂಖ್ಯೆ 17 | • ಗುಂಪು ಚಟುವಟಿಕೆ– ಘನ, ದ್ರವ ಮತ್ತು ಅನಿಲಗಳನ್ನು ಸಿರಿಂಜ್ ನೆರವಿನಿಂದ ಸಂಪೀಡಿಸಿ ಗಾತ್ರದಲ್ಲಾಗುವ ಬದಲಾವಣೆ ಗುರತಿಸುವುದು.<br>• ಇಲೆಕ್ಟ್ರಾನ್ ವಿನ್ಯಾಸದ ಅರ್ಥ ತಿಳಿಸಿ ಇಲೆಕ್ಟ್ರಾನ್ ವಿನ್ಯಾಸ ಬರೆಯುವಾಗ ಅನುಸರಿಸಬೇಕಾದ ನಿಯಮಗಳನ್ನು ಉದಾಹರಣೆಗಳ ಮೂಲಕ ಮನಗಾಣಿಸುವುದು.<br>• ಆಫ್‌ಬಾ ತತ್ವವನ್ನು ಪ್ರತಿನಿಧಿಸುವ ಚಿತ್ರದ ನೆರವಿನಿಂದ ಪರಮಾಣು ಸಂಖ್ಯೆ 1 ರಿಂದ ೩೦ ರವರೆಗಿನ ಧಾತುಗಳ ಇಲೆಕ್ಟ್ರಾನ್ ವಿನ್ಯಾಸ ಬರೆಸುವುದು. |
| **10ನೇ ತರಗತಿಯ ಭೌತಶಾಸ್ತ್ರದ ಕಲಿಕಾಂಶಗಳು** | | |
| **ಕಲಿಕಾಂಶಗಳು** | **ಕಲಿಕಾಂಶವಾರು ಪ್ರಶ್ನೆಗಳು** | **ಚಟುವಟಿಕೆಗಳು** |
| ಶಕ್ತಿ<br>1) ಶಕ್ತಿಯ ಆಕರಗಳ ವಿಧಗಳು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಶಕ್ತಿಯ ಆಕರಗಳು<br>2) ಶಕ್ತಿಯ ರೂಪಗಳು<br>3) ಶಕ್ತಿ ಸಂರಕ್ಷಣಾ ತತ್ವ<br>4) ಉಷ್ಣ ಮತ್ತು ತಾಪಗಳಿಗಿರುವ ವ್ಯತ್ಯಾಸ<br>5) ಉಷ್ಣದ ಪರಿಣಾಮಗಳು<br>6) ವಿಶಿಷ್ಟೋಷ್ಣ ಮತ್ತು ಅನ್ವಯಗಳು<br>7) ಗುಪ್ತೋಷ್ಣ ಮತ್ತು ಅನ್ವಯಗಳು | 1) ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಶಕ್ತಿಯ ಆಕರಗಳಿಗಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.<br>2) ಶಕ್ತಿಯ ರೂಪಗಳನ್ನು ಹೆಸರಿಸಿ.<br>3) ಶಕ್ತಿಯ ಸಂರಕ್ಷಣಾ ತತ್ವವನ್ನು ನಿರೂಪಿಸಿ<br>4) ಉಷ್ಣ ಮತ್ತು ತಾಪಗಳಿಗಿರುವ ವ್ಯತ್ಯಾಸಗಳೇನು?<br>5) ನಿತ್ಯಜೀವನದಲ್ಲಿ ಉಷ್ಣವ್ಯಾಕೋಚನೆಗೆ ಉದಾಹರಣೆ ನೀಡಿ.<br>6) ನೀರು ಹೆಚ್ಚು ವಿಶಿಷ್ಟೋಷ್ಣ ಹೊಂದಿರುವುದರಿಂದ ನಮಾಗಾಗುವ ಅನುಕೂಲಗಳೇನು?<br>7) ಗುಪ್ತೋಷ್ಣ ಎಂದರೇನು? | 1) ಶಕ್ತಿ ಆಕರಗಳನ್ನು ಪಟ್ಟಿಮಾಡಿಸಿ ಅವುಗಳನ್ನು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಶಕ್ತಿಯ ಆಕರಗಳನ್ನಾಗಿ ವಿಂಗಡಿಸಿ ಬರೆಸುವುದು.<br>2) ಸಾಧನಗಳನ್ನು ಪಟ್ಟಿ ಮಾಡಿಸಿ ಹಾಗು ಅವುಗಳಲ್ಲಿ ಶಕ್ತಿಯು ಯಾವ ರೂಪದಿಂದ ಯಾವ ಶಕ್ತಿಯ ರೂಪಕ್ಕೆ ಪರಿವರ್ತನೆಯಾಗುತ್ತಿದೆ ಎಂಬುದರ ಬಗ್ಗೆ ಚರ್ಚೆ.)<br>3) ಸರಳಲೋಲಕದ ಸಹಾಯದಿಂದ ಪ್ರಚ್ಛನ್ನಶಕ್ತಿ ಮತ್ತು ಚಲನಶಕ್ತಿಗಳು ಪರಸ್ಪರ ಪರಿವರ್ತನೆಯಾಗುವುದನ್ನು ನಿರೂಪಿಸುವುದು.<br>4) ಒಂದೇ ತಾಪಮಾನದಲ್ಲಿರುವ ಬೇರೆ ಬೇರೆ ದ್ರವ್ಯರಾಶಿಯ ನೀರಿನ ಉಷ್ಣಶಕ್ತಿಗಳು ಬೇರೆ ಬೇರೆ ಯಾಗಿರುತ್ತವೆ ಎಂಬುದರ ಬಗ್ಗೆ ಚರ್ಚೆ.<br>5) ಉಷ್ಣ ಪರಿಣಾಮದ ಅನ್ವಯಗಳನ್ನು ಪಟ್ಟಿ ಮಾಡಿಸುವುದು.<br>6) ಭೂ ವಾತಾವರಣದ ತಾಪಮಾನದ ವ್ಯಾಪ್ತಿಯು ತಂಬಾ ಕಡಿಮೆ ಇರಲು ಕಾರಣವಾದ ನೀರಿನ ವಿಶಿಷ್ಟೋಷ್ಣದ ಬಗ್ಗೆ ವಿವರಣೆ ನೀಡುವುದು.<br>7) ನೀರಿನ ಕುದಿಬಿಂದು $100^0$ ಗಿಂತ ಹೆಚ್ಚಾಗುವುದಿಲ್ಲ ಎಂಬುದನ್ನು ಪ್ರಯೋಗದ ಮೂಲಕ ತೋರಿಸಿ ನೀರಿನ ಗುಪ್ತೋಷ್ಣವನ್ನು ತಿಳಿಸುವುದು, |
| **ಕಲಿಕಾಂಶಗಳು** | **ಕಲಿಕಾಂಶವಾರು ಪ್ರಶ್ನೆಗಳು** | **ಚಟುವಟಿಕೆಗಳು** |
| ಚಲನೆ<br>1) ನ್ಯೂಟನ್‌ನ ಚಲನೆಯ ಮೂರು ನಿಯಮಗಳು | 1) ನ್ಯೂಟನ್‌ನ ಚಲನೆಯ ಮೂರು ನಿಯಮಗಳನ್ನು ನಿರೂಪಿಸಿ.<br>2) ಸಂವೇಗ ಸಂರಕ್ಷಣಾ ತತ್ವವನ್ನು ತಿಳಿಸಿ. | ಪುಸ್ತಕದಲ್ಲಿರುವ ಪ್ರಯೋಗಗಳನ್ನು ಪುನರಾವರ್ತಿಸಿ ನ್ಯೂಟನ್‌ನ ಚಲನೆಯ ಮೂರು ನಿಯಮಗಳನ್ನು ಮನಗಾಣಿಸುವುದು.<br>2) ಎರಡು ಬೇರೆ ಬೇರೆ ರಾಶಿಯ ಮತ್ತು ಒಂದೇ ರಾಶಿಯ ಗೋಲಿಗಳನ್ನು ಡಿಕ್ಕಿ ಹೊಡೆಸು |

| | | |
|---|---|---|
| 2) ಸಂವೇಗ ಮತ್ತು ಸಂವೇಗ ಸಂರಕ್ಷಣಾ ತತ್ವ<br>3) ವಿಶ್ವಗುರುತ್ವಾಕರ್ಷಣ ನಿಯಮ<br>4) ತರಂಗ ಮತ್ತು ಅದರ ಲಕ್ಷಣಗಳು ತರಂಗದೂರ, ಅವೃತ್ತಿ ಮತ್ತು ವೇಗ<br>5) ಅಡ್ಡ ಮತ್ತು ನೀಳ ತರಂಗಗಳಿಗಿರುವ ವತ್ಯಾಸ<br>6) ವಿದ್ಯುತ್ ಕಾಂತೀಯ ತರಂಗದ ಲಕ್ಷಣಗಳು | 3) ಗುರುತ್ವ ಬಲದ ಸೂತ್ರ ಬರೆಯಿರಿ<br>4) ತರಂಗದೂರ, ಅವೃತ್ತಿ ಮತ್ತು ವೇಗ ಗಳಿಗಿರುವ ಸಂಬಂಧ ತಿಳಿಸಿ.<br>5) ಅಡ್ಡ ಮತ್ತು ನೀಳ ತರಂಗಗಳಿಗಿರುವ ವ್ಯತ್ಯಾಸಗಳೇನು?<br>6) ವಿದ್ಯುತ್ ಕಾಂತೀಯ ತರಂಗಗಳು ಯಾಂತ್ರಿಕ ತರಂಗಗಳಿಗಿಂತ ಹೇಗೆ ಭಿನ್ನವಾಗಿವೆ? | ಚಟುವತಿಕೆಗಳ ಮೂಲಕ ಸಂವೇಗ ಸಂರಕ್ಷಣೆ ಯಾಗುವುದನ್ನು ನಿರೂಪಿಸುವುದು.<br>3) ಗುರುತ್ವ ಬಲವು ವಸ್ತುಗಳ ದ್ರವ್ಯರಾಶಿ ಮತ್ತು ಅವುಗಳ ನಡುವಿನ ದೂರನ್ನು ಹೇಗೆ ಅವಲಂಬಿಸಿದೆ ಎಂದು ಲೆಕ್ಕಗಳನ್ನು ಬಿಡಿಸಿ ನಿರೂಪಿಸುವುದು.<br>4) ತರಂಗದೂರ, ಅವೃತ್ತಿಗಳು ಬದಲಾದರೂ ತರಂಗದ ವೇಗ ಬದಲಾಗದಿರುವುದನ್ನು ಉದಾಹರಣೆಗಳೊಂದಿಗೆ ಮನಗಾಣಿಸುವುದು.<br>5) ದತ್ತ ಉದಾಹರಣೆಗಳನ್ನು ಅಡ್ಡ ಮತ್ತು ನೀಳ ತರಂಗಗಳಾಗಿ ವರ್ಗೀಕರಿಸುವುದು<br>6) ವಿದ್ಯುತ್ ಕಾಂತೀಯ ತರಂಗದ ಲಕ್ಷಣಗಳನ್ನು ಪಟ್ಟಿ ಮಾಡಿಸುವುದು |
| **ಕಲಿಕಾಂಶಗಳು** | **ಕಲಿಕಾಂಶವಾರು ಪ್ರಶ್ನೆಗಳು** | **ಚಟುವಟಿಕೆಗಳು** |
| ವಿದ್ಯುತ್ ಶಕ್ತಿ<br>1) ವಿದ್ಯುತ್ ಶಕ್ತಿಯ ಆಕರಗಳು<br>2) ವಿದ್ಯುತ್ ಪ್ರವಾಹ, ವಿದ್ಯುತ್ ವಿಭವ, ವಿಭವಾಂತರ , ವಿದ್ಯುತ್ ಚಾಲಕ ಬಲ<br>3) ವಿದ್ಯುತ್ ಕಾಂತೀಯ ಪರಿಣಾಮ | 1) ವಿದ್ಯುತ್ ಶಕ್ತಿಯ ವಿವಿಧ ಆಕರಗಳನ್ನು ಹೆಸರಿಸಿ.<br>2) ಕೆಳಗಿನವುಗಳನ್ನು ವ್ಯಾಖ್ಯಾನಿಸಿ ವಿದ್ಯುತ್ ಪ್ರವಾಹ, ವಿದ್ಯುತ್ ವಿಭವ, ವಿಭವಾಂತರ , ವಿದ್ಯುತ್ ಚಾಲಕ ಬಲ<br>3) ಪ್ರಭಲವಾದ ವಿದ್ಯುತ್ ಆಯಸ್ಕಾಂತ ತಯಾರಿಸುವ ವಿಧಾನವನ್ನು ವಿವರಿಸಿ. | 1) ವಿದ್ಯುತ್ ಶಕ್ತಿಯ ವಿವಿಧ ಆಕರಗಳನ್ನು ಪಟ್ಟಿ ಮಾಡಿಸುವುದು.<br>2) ವಿದ್ಯುತ್ ಪ್ರವಾಹ, ವಿದ್ಯುತ್ ವಿಭವ, ವಿಭವಾಂತರ , ವಿದ್ಯುತ್ ಚಾಲಕ ಬಲಗಳ ಪರಿಕಲ್ಪನೆಯನ್ನು ವಿದ್ಯುನ್ ಮಂಡಲಗಳನ್ನು ಬಳಸಿ ಮೂಡಿಸುವುದು. |